## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231 (369)
ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್,
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11.12.2024
ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>೦</th><th>ಪ್ರಶ್ನೆ</th><th>ಉತ್ತರ</th></tr>
<tr><td>)</td><td>ಶಾಲಾ ವಾಹನಗಳ ಚಾಲಕರು ಕುಡಿದು ವಾಹನ ಚಲಾಯಿಸುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿರುತ್ತದೆ.</td></tr>
<tr><td>)</td><td>ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಪರಿಣಾಮಕಾರಿ ಕ್ರಮಗಳೇನು;</td><td>➢ ಎಲ್ಲಾ ಶಾಲಾ ಆಡಳಿತ ಮಂಡಳಿಯವರಿಗೆ ಚಾಲಕರುಗಳನ್ನು ನೇಮಕ ಮಾಡಿಕೊಳ್ಳುವಾಗ ಚಾಲಕರುಗಳಿಗೆ ಮದ್ಯ ಸೇವನೆ ಮಾಡಿ ವಾಹನ ಚಾಲನೆ ಮಾಡ ಬಾರದು ಎಂದು ಸೂಚಿಸುವಂತೆ ತಿಳಿಸಲಾಗಿರುತ್ತದೆ ಮತ್ತು ಶಾಲಾ ವಾಹನ ಚಾಲಕರುಗಳಿಗೂ ಸಹ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.<br>➢ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, ಅಲ್ಲಿನ ಆಡಳಿತ ಮಂಡಳಿ ಮತ್ತು ಎಲ್ಲಾ ಶಾಲಾ ವಾಹನಗಳ ಚಾಲಕರುಗಳಿಗೆ ಕುಡಿದು ವಾಹನ ಚಾಲನೆ ಮಾಡುವುದರಿಂದ ಆಗುವ ಅಪಾಯ/ ದುಷ್ಪರಿಣಾಮಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.<br>➢ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಶಾಲಾ ವಾಹನಗಳ ಚಾಲಕರುಗಳ ವಿರುದ್ಧ ಕಾಲ ಕಾಲಕ್ಕೆ ವಿಶೇಷ ಕಾರ್ಯಾಚರಣೆಯನ್ನು ನಡೆಸಿ, ಐ.ಎಂ.ವಿ. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ.<br>➢ ಸಾಮಾಜಿಕ ಜಾಲತಾಣಗಳ ಮೂಲಕ ಮದ್ಯಪಾನ ಮಾಡಿ ವಾಹನ ಚಲಾಯಿಸುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br>➢ ಮದ್ಯಪಾನ ಮಾಡಿ ವಾಹನ ಚಲಾಯಿಸುವ ಚಾಲಕರ ಚಾಲನ ಪತ್ರ ಮತ್ತು ರಹದಾರಿಗಳನ್ನು ತಾತ್ಕಾಲಿಕವಾಗಿ ಅಮಾನತ್ತುಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.</td></tr>
<tr><td>)</td><td>ಈವರೆಗೆ ಎಷ್ಟು ಜನ ಶಾಲಾ ವಾಹನ ಚಾಲಕರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ದಂಡ ವಿಧಿಸಲಾಗಿದೆ?</td><td>ಪೊಲೀಸ್ ಇಲಾಖೆಯು, ಮದ್ಯಪಾನ ಮಾಡಿ ಶಾಲಾ ವಾಹನಗಳನ್ನು ಚಲಾಯಿಸಿರುವ ಚಾಲಕರುಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳು ಮತ್ತು ದಂಡ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th colspan="3">ವರ್ಷ</th><th rowspan="2">ನ್ಯಾಯಾಲಯದಲ್ಲಿ ವಿಧಿಸಿರುವ ದಂಡದ ಮೊತ್ತ. ರೂ.</th></tr>
<tr><th>2022</th><th>2023</th><th>2024 (ನವೆಂಬರ್ ಅಂತ್ಯದವರೆಗೆ)</th></tr>
<tr><td>09</td><td>32</td><td>94</td><td>13,56,500/-</td></tr>
</table></td></tr>
</table>

| | | |
|---|---|---|
| | | **ಸಾರಿಗೆ ಇಲಾಖೆಯು,** ಅನಧಿಕೃತವಾಗಿ ಸಂಚರಿಸುತ್ತಿರುವ ಶಾಲಾ ವಾಹನಗಳ ವಿರುದ್ಧ ನಿರಂತರವಾಗಿ ಪ್ರವರ್ತನ ಕಾರ್ಯ ಹಮ್ಮಿಕೊಳ್ಳುತ್ತಿದ್ದು, ಏಪ್ರಿಲ್-2024 ರಿಂದ ಅಕ್ಟೋಬರ್-2024ರವರೆಗೆ ಇತರ ಅಪರಾಧಗಳಿಗೆ ಸಂಬಂಧಿಸಿದಂತೆ ಒಟ್ಟು 16823 ಶಾಲಾ ವಾಹನಗಳ ತಪಾಸಣೆ ನಡೆಸಿ, 1248 ವಾಹನಗಳ ಮೇಲೆ ಪ್ರಕರಣಗಳನ್ನು ದಾಖಲಿಸಿ, 72 ವಾಹನಗಳನ್ನು ವಶಪಡಿಸಿಕೊಂಡು ಒಟ್ಟು ರೂ.1,17,43,173/- (ಒಂದು ಕೋಟಿ ಹದಿನೇಳು ಲಕ್ಷದ ನಲವತ್ತ ಮೂರು ಸಾವಿರದ ಒಂದುನೂರ ಎಪ್ಪತ್ತ ಮೂರು ರೂಪಾಯಿಗಳು ಮಾತ್ರ) ಗಳನ್ನು ದಂಡದ ರೂಪದಲ್ಲಿ ಸಂಗ್ರಹಿಸಲಾಗಿರುತ್ತದೆ. |

ಹೆಚ್‌ಡಿ 628 ಎಸ್‌ಎಸ್‌ಟಿ 2024

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು.